

ಅವ್ನಿಗೆ ಎಷ್ಟು ಮೀಟ್ರಿದ್ರೆ ನನ್ನತ್ರ ಹೀಗ್ ಮಾತಾಡ್ತಾನೆ

ಡಬ್ಬಾ ಐಡಿಯಾ ಕೊಡಬೇಡ, ಡೀಲ್ ಆಗೋವಂಥದ್ದು ಏನಾದ್ರು ಇದ್ರೆ ಹೇಳು...

ಲ್ಯಾಬ್‌ನಲ್ಲಿ ಕೂತ್ಕೊಂಡು ಬೇಡದೆ ಇರೋ ಪಿಚ್ಚರ್ ಗಿಚ್ಚರ್ ಎಲ್ಲಾ ನೋಡಿದ್ರೆ ಅಂತ ತಲೆ ತಿರುಗಿ 'ಲೋ ಕಂಪ್ಯೂಟರ್‌ನಲ್ಲಿ ಪಿಚ್ಚರ್ ಬೇರೆ ನೋಡ್ತೀರಾ! ಎಚ್‌ಎಂಗೆ ಹೇಳ್ತೀನಿ ಇರು' ಎಂದು ಗದರಿದೆ. ಅವನೋ ಅಷ್ಟೇ ಕೂಲಾಗಿ 'ಅಯ್ಯೋ ಮೇಡಂ ಹಂಗಲ್ಲ, ಪಿಚ್ಚರ್ ಬಿಟ್ಟಿದೆ ಅಂದ್ರೆ ಅದು ಹಾಳಾಗಿದೆ ಅಂತ ಅರ್ಥ. ಪಿಚ್ಚರ್ ಮುಗಿದ ಮೇಲೆ ಕೊನೆಲಿ 'ದ ಎಂಡ್' ಅಂತ ತೋರಿಸಲ್ವ, ಅದುಕ್ಕೆ ಇನ್ನ ಇದರ ಕಥೆ ಮುಗೀತು, ಇನ್ನೇನು ರಿಪೇರಿ ಆಗಲ್ಲ ಅನ್ನದಕ್ಕೆ ಪಿಚ್ಚರ್ ಬಿಡ್ತು ಅನ್ನದು ಅಂದವನು ಹಲ್ಲು ಕಿರಿದಾಗ ಏನು ಹೇಳೋದು! ಇನ್ನೂ ಅಲ್ಲೇ ಕೂತಿದ್ದರೆ ನನ್ನ ಪಿಚ್ಚರ್ ಕೂಡ ಬಿಡುತ್ತೆ ಎಂದುಕೊಂಡು ಅಲ್ಲಿಂದ ಎದ್ದು ಬಂದೆ.

ನನ್ನ ಪ್ಲಾನ್ ಎಲ್ಲ ಚಿತಲ್ ಪತಲ್ ಆಗೋಯ್ತು...

ಈ ಪಿಚ್ಚರ್ ಬಿಡ್ತು ಪ್ರಯೋಗ ಹೆಂಗೆಲ್ಲ ಮಾಡ್ತಾರೆ ಅಂದ್ರೆ, ಪೆನ್ನು ಬರೆಯದಿದ್ರೆ ಪೆನ್ನಿನ ಪಿಚ್ಚರ್ ಬಿಟ್ಟಿದೆ, ರಿಮೋಟ್ ವರ್ಕ್ ಆಗದಿದ್ರೆ, ಬೆಂಚಿನ ಸ್ಕ್ರೂ ಲೂಸಾಗಿ ಬೆಂಚು ಅಲ್ಲಾಡುತ್ತಿದ್ರೆ, ನಲ್ಲಿ ಪೈಪ್ ಒಡೆದು ಹೋಗಿದ್ರೆ, ಸೈಕಲ್ ಟೈರ್ ಪಂಕ್ಚರ್ ಆಗಿದ್ರೆ ಎಲ್ಲದಕ್ಕೂ ಪಿಚ್ಚರ್ ಬಿಡಿಸೋದೆ ಇವು. ಅದು ಹೋಗ್ಲಿ ಯಾರೋ ಬಿದ್ದು ಕಾಲು ಫ್ರಾಕ್ಚರ್ ಮಾಡಿಕೊಂಡಿದ್ದಾಗಲೂ 'ಅವನ ಕಾಲು ಪಿಚ್ಚರ್ ಬಿಟ್ಟಿದೆ ಮೇಡಂ ಅದುಕ್ಕೆ ಅವ್ನು ಬಂದಿಲ್ಲ' ಅಂದ ಭೂಪರಿವರು.

ಈ ವಿಶೇಷ ಪದಗಳ, ನುಡಿಗಟ್ಟುಗಳ ಪ್ರಯೋಗ ನನ್ನ ವಿದ್ಯಾರ್ಥಿಗಳು ಮಾತ್ರ ಮಾಡೋದಿಲ್ಲ. ಬಂಧು ಬಳಗದವರಲ್ಲೂ, ಮಿತ್ರವೃಂದದಲ್ಲೂ ಈ ವಿಶಿಷ್ಟ ವಿದ್ಯಾಪ್ರವೀಣರು ಬೇಕಾದಷ್ಟಿದ್ದಾರೆ. ಅದರಲ್ಲೂ ನನ್ನಣ್ಣ ತಮ್ಮನ ಮಾತಿನ ಬಾಣಗಳ ಬತ್ತಳಿಕೆ ಇಂಥವುಗಳ ಅಕ್ಷಯ ತೂಣೀರವೆ ಸರಿ. ನಾನೋ ನನ್ನ ಬರವಣಿಗೆ ಕೌಶಲದ ಬಗ್ಗೆ ನನ್ನ ಬೆನ್ನು ನಾನೇ ತಟ್ಟಿಕೊಳ್ಳುತ್ತಾ, ಹೆಮ್ಮೆಯ ಗಾಳಿ ತುಂಬಿದ ಬಲೂನಾಗಿ ಹಾರಾಡುತ್ತಿದ್ದಾಗ ನನ್ನಣ್ಣ 'ಲೇ ಎಷ್ಟು ಅಂತ ಈ ಬುಕಾಳಿ ಕಥೆಗಳ ಬರೀತಿಯ, ಸ್ವಲ್ಪ ರಿಯಲ್ ಆಗೂ ಬರಿ' ಎಂದು ನನ್ನ ಅಹಂನ ಬಲೂನಿಗೆ ಮಾತಿನ ಮೊನೆ ಚುಚ್ಚಿ ಹೆಮ್ಮೆಯ ಗಾಳಿ ತೆಗೆದು ನೆಲಕ್ಕೆಳಿಸಿದ.

ಅಂದಹಾಗೆ ಈ ಬುಕಾಳಿ ಕಥೆ ಅಂದರೆ ಯಾವುದೋ ದೇವಿ ಮಹಾತ್ಮೆ ಅಲ್ಲ. ಅತಿ ರಂಜಿತ, ಕಾಲ್ಪನಿಕ, ಅಪದ್ಧ, ಅವಾಸ್ತವಿಕ, ಅತಿ ವರ್ಣಿತ ಇತ್ಯಾದಿ ಇತ್ಯಾದಿ... ನಾಲಿಗೆಯೇ ಹೊರಳದ ಕ್ಲಿಷ್ಟ ಪದಗಳಿಗೆ ಸಮಾನಾರ್ಥಕವಾಗಿ ಬಳಸುವ ಏಕೈಕ ಪದವೇ ಬುಕಾಳಿ.

ಅವ್ನಿಗೆ ಎಷ್ಟು ಜಾಕ್ ಹಾಕ್ತಾವ್ನೆ ನೋಡು, ನಿಜ ಅಂತ ನಂಬಿದ್ರೆ ಮುಗೀತು ಕಥೆ...

ನನ್ನ ಗೆಳತಿಯೊಬ್ಬಳಿಗೆ ಮಾತಿನಲ್ಲಿ ಗಾದೆ ಮಾತುಗಳು ಬರುವಷ್ಟು ಸರಾಗವಾಗಿ ಈ ಪದಪುಂಜಗಳು ನುಗ್ಗುತ್ತವೆ. ಅವಳ ಪ್ರಕಾರ ಕಿವಿಯಲ್ಲಿ ಹೂ ಇಡೋದು, ಇಡಿಸಿಕೊಳ್ಳೋದು ಅಂದ್ರೆ ಮೋಸ ಮಾಡೋದು, ಮಾಡಿಹೋಗೋದು ಅಂತರ್ಥ. 'ಏನು ಕಿವೀಲಿ ಹೂ ಕಾಣ್ತಾ ಇದಿಯಾ?' ಅಂತ ಯಾರಿಗಾದ್ರೂ ದಬಾಯಿಸಿದಳು ಅಂದ್ರೆ 'ನಾನೇನು ಪೆದ್ದಿನಾ' ಅಂತ ಹೇಳ್ತಾ ಇದ್ದಾಳೆ ಅಂತ ಕೇಳುವವರು ತಿಳಿದುಕೊಳ್ಳಬೇಕು. ಗೆಳತಿಯರ ಗುಂಪಿನಲ್ಲಿ ಕುಳಿತು ಹರಟುವಾಗ 'ಎಲ್ಲೋ ಸುಟ್ಟ ವಾಸನೆ ಬರ್ತಾ ಇದೆ' ಅಂದ್ರೆ ಅದು ಯಾರಿಗೋ ಹೊಟ್ಟೆಕಿಚ್ಚಾಗ್ತಿದೆ ಅನ್ನೋದಕ್ಕೆ ಅವಳು ಕೊಟ್ಟಿರೋ ಕೋಡ್ ವರ್ಡ್.

ಇದೆಲ್ಲಾ ಸಾಲದು ಅಂತ 'ಕೌಂಟ್ ಡೌನ್' ಸಾಮಾನ್ಯ ರಾಕೆಟ್ ಲಾಂಚ್‌ನಲ್ಲಿ ಬಳಸಿದರೆ, ಇವಳೊ ಯಾವುದಾದರೂ ಕೆಲಸ ಹಾಳಾಗುವ ಹಂತ ತಲುಪಿದ್ದರೆ, ಯಾವುದಾದ್ರೂ ವಸ್ತು ಬಳಸಿ ಬಳಸಿ ಇನ್ನೇನು ಎಸೆಯುವ ಮಟ್ಟ ಮುಟ್ಟುತ್ತಾ ಇದ್ದರೆ ಇತ್ಯಾದಿ ಇತ್ಯಾದಿ ಹಾಳುಗರಿ ವಿಷಯಗಳ ತಿಳಿಸಲೇ 'ಅದ್ರುದು ಕೌಂಟ್ ಡೌನ್ ಶುರುವಾಯ್ತು' ಅನ್ನೋ ಭೂಪಿ.

ಒಮ್ಮೆ ಏನಾಯ್ತು ಅಂದ್ರೆ ಅವಳ ಗೆಳತಿಯೊಬ್ಬಳ ಹತ್ರ ಮಾತಾಡುವಾಗ ಆ ಗೆಳತಿ ತನ್ನಜ್ಜನ ಹಾಳಾಗಿರುವ ಆರೋಗ್ಯದ ಬಗ್ಗೆ ಕೊರಗುತ್ತಾ, 'ಆಸ್ಪತ್ರೆಯಲ್ಲಿದ್ದಾರೆ ಕಣೆ, ಏನಾಗುತ್ತೋ ಗೊತ್ತಿಲ್ಲ' ಎಂದರೆ. ಇವಳು ಹಿಂದೆ ಮುಂದೆ ಯೋಚಿಸದೆ ತೆಗೆದ ಬಾಯಿಗೆ 'ಓ ತಾತನ ಕೌಂಟ್ ಡೌನ್ ಶುರು ಅನ್ನು' ಎಂದು ಬಿಟ್ಟಿದ್ದಾಳೆ. ಆ ಗೆಳತಿಗೆ ಏನೆಂದು ಉತ್ತರಿಸಬೇಕು ಅಂತ ತೋಚದೆ ಕರೆ ಕತ್ತರಿಸಿದವಳು ಮತ್ತೆಂದೂ ಇವಳ ಬಳಿ ಮಾತನಾಡಿಲ್ಲ. ಈ ಬಗ್ಗೆ ನನ್ನ ಬಳಿ ಹೇಳಿಕೊಂಡು 'ಛೆ ಅವತ್ತು ಏನಾಯ್ತೋ ಕಣೆ, ನಾನು ಹಂಗನ್ನಬಾರದಿತ್ತು' ಎಂದು ಪೇಚಾಡಿದಳು. ನಾನೂ 'ಹೋಗ್ಲಿ ಬಿಡು, ಟ್ರೈನ್ ಹೋದ ಮೇಲೆ ಟಿಕೆಟ್ ತೊಗೊಂಡು ಏನು ಪ್ರಯೋಜನ' ಎಂದು ಅವಳದೇ ಸ್ಲ್ಯಾಂಗ್‌ನಲ್ಲಿ ಸಮಾಧಾನಿಸಿದೆ.

ಅಂತೂ ಇನ್ನೂ ಉಳಿದಿರುವ ಹಲವು ವರ್ಷಗಳ ಶಿಕ್ಷಕ ವೃತ್ತಿಯ ಸೇವೆಯಲ್ಲಿ ಮುಂದೆ ಬರಲಿರುವ ವಿದ್ಯಾರ್ಥಿಗಳ ಸ್ಲ್ಯಾಂಗ್‌ಗಳಿಗಾಗಿ ಕಾಯುತ್ತಾ, ನೆಂಟರಿಷ್ಟರು, ಗೆಳೆಯ ಗೆಳತಿಯರು ಬಳಸುವ ವಿಚಿತ್ರ ಪದಗಳು, ನುಡಿಗಟ್ಟುಗಳ ಸಂಗ್ರಹಿಸಿ, ನಿವೃತ್ತಿ ನಂತರ ಒಂದು ಬೃಹತ್ 'ವಿಚಿತ್ರ ಪದಕೋಶ' ಎನ್ನುವ ಪುಸ್ತಕ ಮಾಡಿ, ಕನ್ನಡ ತಾಯಿಯ ಸೇವೆ ಮಾಡಿ ಕೃತಕೃತ್ಯಳಾಗುವ ಬುಕಾಳಿ ಕನಸೊಂದನ್ನು ಕಾಣುತ್ತಿದ್ದೇನೆ. ■